**ಕರ್ನಾಟಕ ಸರ್ಕಾರ**

**ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ**

**ಆಯುಕ್ತರ ಕಛೇರಿ, ನಂ.16/-ಡಿ, 3ನೇ ಮಹಡಿ, ಡಿ.ದೇವರಾಜ ಅರಸು ಭವನ**

**ಮಿಲ್ಲರ್ಸ್ ಕೆರೆ ಅಂಗಳ, ವಸಂತ ನಗರ, ಬೆಂಗಳೂರು-52.**

ಸಂಖ್ಯೆ:ಹಿಂವಕ-ಸಿಬ್ಬಂದಿ-2/ಸಿಆರ್-2/2021-22 ದಿನಾಂಕ:25.08.2021

## ಸಾರ್ವಜನಿಕ ಪ್ರಕಟಣೆ

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಹಿಂದುಳಿದ ವರ್ಗಗಳ ಅಭಿವೃದ್ಧಿಗಾಗಿ ವಿದ್ಯಾರ್ಥಿ ನಿಲಯಗಳು, ವಿದ್ಯಾರ್ಥಿವೇತನ, ಸಮುದಾಯ ಭವನ ನಿರ್ಮಾಣ ಅಲೆಮಾರಿ/ ಅರೆ ಅಲೆಮಾರಿ ಸಮುದಾಯದವರ ಅಭಿವೃದ್ಧಿ ಕಾರ್ಯಕ್ರಮ ಫಲಾನುಭವಿಗಳ ಆರ್ಥಿಕ ಅಭಿವೃದ್ಧಿಗಾಗಿ ಸಾಲ ಸೌಲಭ್ಯ , ಗಂಗಾಕಲ್ಯಾಣ ಮುಂತಾದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಸದರಿ ಕಾರ್ಯಕ್ರಮಗಳ ಅನುಷ್ಠಾನದ ವಿಧಾನ ಮತ್ತು ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನದಲ್ಲಿ ಕೈಗೊಳ್ಳಬೇಕಾದ ಸುಧಾರಣಾ ಕ್ರಮಗಳು ಮತ್ತು ವಿದ್ಯಾರ್ಥಿ ಕೇಂದ್ರೀಕೃತ ಲೇಖನಗಳನ್ನು ಪ್ರಕಟಿಸಲು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಒಂದು ಮಾಸ ಪತ್ರಿಕೆಯನ್ನು ತರಲು ಉದ್ದೇಶಿಸಿದ್ದು, ಸದರಿ ಮಾಸಪತ್ರಿಕೆಗೆ ಹೆಸರನ್ನು ಸೂಚಿಸುವಂತೆ ಕೋರಿ ಈ ಸಾರ್ವಜನಿಕ ಪ್ರಕಟಣೆಯನ್ನು ಹೊರಡಿಸಲಾಗಿದೆ.

ಆಸಕ್ತ ಸಾರ್ವಜನಿಕರು, ಇಲಾಖಾ ಅಧಿಕಾರಿಗಳು ಹಾಗೂ ಇಲಾಖಾ ವಿದ್ಯಾರ್ಥಿ ನಿಲಯಗಳಲ್ಲಿನ ವಿದ್ಯಾರ್ಥಿಗಳು ಸದರಿ ಮಾಸಪತ್ರಿಕೆಗೆ ಹೆಸರನ್ನು ಇಲಾಖೆಯ ಇ-ಮೇಲ್ ವಿಳಾಸ **bcdbng@kar.gov.in** ವಿಳಾಸಕ್ಕೆ ದಿನಾಂಕ:31-08-2021ರ ಸಂಜೆ 5.30ರೊಳಗಾಗಿ ಕಳುಹಿಸಬಹುದಾಗಿರುತ್ತದೆ.

ಆಯುಕ್ತರು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು.